ವಟವೃಕ್ಷದ ಸಮೀಪದಲ್ಲಿ ಕುಳಿತು ಸಕಲ ಮುನಿಗಳಿಗೂ ಸಾಕ್ಷಾತ್ತಾಗಿ ಜ್ಞಾನವನ್ನು ದಾನಮಾಡುತ್ತಿರುವವನೂ, ಮೂರು ಲೋಕಗಳ ಗುರುವೂ, ಈಶ್ವರನೂ, ಜನನಮರಣರೂಪವಾದ ದುಃಖವನ್ನು ನಾಶಮಾಡುವುದರಲ್ಲಿ ದಕ್ಷನೂ ಆದ ಶ್ರೀದಕ್ಷಿಣಾ ಮೂರ್ತಿಗೆ ನಮಸ್ಕರಿಸುತ್ತೇನೆ.

**ಚಿತ್ರಂ ವಟತರೋರ್ಮೂಲೇ ವೃದ್ಧಾಃ ಶಿಷ್ಯಾ ಗುರುರ್ಯುವಾ**
**ಗುರೋಸ್ತು ಮೌನಂ ವ್ಯಾಖ್ಯಾನಂ ಶಿಷ್ಯಾಸ್ತು ಛಿನ್ನಸಂಶಯಾಃ ॥ ೧೨॥**

ಇದು ಬಹಳ ಆಶ್ಚರ್ಯ ! ವಟವೃಕ್ಷದ ಕೆಳಗಿದ್ದ ಶಿಷ್ಯರೆಲ್ಲರೂ ವೃದ್ಧರು ; ಗುರುವಾದರೋ ಯುವಕ ! ಮೌನವೇ ಗುರುವಿನ ವ್ಯಾಖ್ಯಾನ; ಅದರಿಂದಲೇ ಶಿಷ್ಯರ ಸಂಶಯಗಳೆಲ್ಲವೂ ನಿವಾರಣೆಯಾದವು !

**ಓಂ ನಮಃ ಪ್ರಣವಾರ್ಥಾಯ ಶುದ್ಧಜ್ಞಾನೈಕಮೂರ್ತಯೇ ।**
**ನಿರ್ಮಲಾಯ ಪ್ರಶಾಂತಾಯ ದಕ್ಷಿಣಾಮೂರ್ತಯೇ ನಮಃ ॥ ೧೩॥**

ಪ್ರಣವದ ವಾಚ್ಯನೂ, ಶುದ್ಧಜ್ಞಾನದ ಮೂರ್ತಿಯೂ, ನಿರ್ಮಲನೂ, ಪ್ರಶಾಂತನೂ ಆದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

**ನಿಧಯೇ ಸರ್ವವಿದ್ಯಾನಾಂ ಭಿಷಜೇ ಭವರೋಗಿಣಾಮ್ ।**
**ಗುರವೇ ಸರ್ವಲೋಕಾನಾಂ ದಕ್ಷಿಣಾಮೂರ್ತಯೇ ನಮಃ ॥೧೪॥**

ಸಮಸ್ತ ವಿದ್ಯೆಗಳ ನಿಧಿಯೂ, ಭವರೋಗಕ್ಕೆ ವೈದ್ಯನೂ, ಸಮಸ್ತ ಲೋಕಕ್ಕೂ ಗುರುವು ಆದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

**ಚಿದ್ಘನಾಯ ಮಹೇಶಾಯ ವಟಮೂಲನಿವಾಸಿನೇ ।**
**ಸಚ್ಚಿದಾನಂದರೂಪಾಯ ದಕ್ಷಿಣಾಮೂರ್ತಯೇ ನಮಃ ॥೧೫॥**

ವಟವೃಕ್ಷದ ತಲದಲ್ಲಿ ಕುಳಿತಿರುವ, ಚಿದ್ಘನನೂ ಮಹೇಶ್ವರನೂ ಸಚ್ಚಿದಾನಂದನೂ ಆಗಿರುವ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

**ಮೌನವ್ಯಾಖ್ಯಾಪ್ರಕಟಿತಪರಬ್ರಹ್ಮತತ್ತ್ವಂ ಯುವಾನಂ**
**ವರ್ಷಿಷ್ಠಾಂತೇವಸದೃಷಿಗಣೈರಾವೃತಂ ಬ್ರಹ್ಮನಿಷ್ಠೈಃ ।**
**ಆಚಾರ್ಯೇಂದ್ರಂ ಕರಕಲಿತಚಿನ್ಮುದ್ರಮಾನಂದರೂಪಂ**
**ಸ್ವಾತ್ಮಾರಾಮಂ ಮುದಿತವದನಂ ದಕ್ಷಿಣಾಮೂರ್ತಿಮೀಡೇ ॥ ೧೬॥**

ಬ್ರಹ್ಮಜ್ಞಾನವನ್ನು ಮೌನವಾಗಿ ಬೋಧಿಸುವವನೂ, ಯುವಕನೂ, ಬ್ರಹ್ಮನಿಷ್ಠರಾದ ವೃದ್ಧಮಹರ್ಷಿಗಳಿಂದ ಪರಿವೇಷ್ಟಿತನಾದ ಆಚಾರ್ಯೇಂದ್ರನೂ, ಚಿನ್ಮುದ್ರೆಯಿಂದ ಕೂಡಿದ ಹಸ್ತವುಳ್ಳವನೂ, ಆನಂದಸ್ವರೂಪನೂ, ಆತ್ಮಾರಾಮನೂ, ಸಂತೋಷದ ಮುಖವುಳ್ಳವನೂ ಆದ ಶ್ರೀದಕ್ಷಿಣಾಮೂರ್ತಿಯನ್ನು ಸ್ತುತಿಸುತ್ತೇನೆ.

**(ಈ ಸ್ತೋತ್ರದ ಸರಳವಾದ ಅರ್ಥವನ್ನು ಮನನ ಮಾಡಿಕೊಂಡು ಪಾರಾಯಣ ಮಾಡುವುದರಿಂದ ಗುರುತತ್ತ್ವದ, ವೇದಾಂತ ತತ್ತ್ವದ ಭಾವ ವಾಚಕನ ಹೃದಯಕ್ಕಿಳಿದು, ಅವನ ಬುದ್ಧಿ-ವಿವೇಕಗಳನ್ನು ಪ್ರಚೋದಿಸಿ, ಸಾಧನೆಗೆ ಅವನನ್ನು ಮುನ್ನಡೆಸುವುದರಲ್ಲಿ ಸಂದೇಹ ವಿಲ್ಲ. ಸ್ತೋತ್ರಗಳ ಅರ್ಥವನ್ನು ವಿಸ್ತೃತವಾಗಿ ತಿಳಿಯಬಯಸುವವರು 'ಮಾನಸೋಲ್ಲಾಸ' ವಾರ್ತಿಕವನ್ನು ಓದಬಹುದು.)**

***ಹೆಚ್ಚಿನ ಓದಿಗೆ:***

**1. Dakshinamurthi Stotra with Manasollasa** -by Swami Harshananda, Ramakrishna Math, Bull Temple Road, Bangalore- 560019 [1992; 158 pages; ₹ 25]

**2. ಶ್ರೀದಕ್ಷಿಣಾಮೂರ್ತಿ ಸ್ತೋತ್ರ ಮತ್ತು ಮಾನಸೋಲ್ಲಾಸ,** ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ, ಮೈಸೂರು–570020 [2013; 160 ಪುಟಗಳು; ₹ ೪೦]

*

## ಶ್ರೀರಾಮಕೃಷ್ಣ ದರ್ಶನ



ಶ್ರೀರಾಮಕೃಷ್ಣರ ಅಣ್ಣನ ಮಗ ರಾಮಲಾಲ ಹೀಗೊಂದು ಘಟನೆಯನ್ನು ಹೇಳುತ್ತಾರೆ:

ಅಯೋಧ್ಯೆಯಲ್ಲಿ ರಾಮಾಯತ ಸಂಪ್ರದಾಯಕ್ಕೆ ಸೇರಿದ ತರುಣ ಸಾಧುವೊಬ್ಬನಿದ್ದ. ಭಗವಂತ ಭೂಮಿಯಲ್ಲಿ ಅವತರಿಸಿದ್ದಾನೆ, ಅವನು ಪೂರ್ವ ದೇಶದಲ್ಲೆಲ್ಲೋ ಜೀವಂತವಾಗಿದ್ದಾನೆ ಎಂದು ಅವನಿಗೆ ದರ್ಶನದಲ್ಲಿ ತಿಳಿದುಬಂತು. ಆ ಸಾಧು ಭಗವಂತನನ್ನು ಕಾಣಲು ಬರಿಗಾಲಲ್ಲಿ ನಡಿಗೆ ಆರಂಭಿಸಿದ. ಅವನು ಬಂಗಾಳಕ್ಕೆ ಬಂದಾಗ, ಕಲ್ಕತ್ತೆಯ ದಕ್ಷಿಣೇಶ್ವರದಲ್ಲಿ ಶ್ರೀರಾಮಕೃಷ್ಣರೆಂಬ ಮಹಾನ್ ಸಂತರಿದ್ದಾರೆ ಎಂಬ ವಿಷಯ ತಿಳಿದುಬಂತು. ಹಲವೆಡೆ ವಿಚಾರಿಸಿ, ಕೊನೆಗೂ ಅವನು ದಕ್ಷಿಣೇಶ್ವರಕ್ಕೆ ಬಂದ. ಆದರೆ ಅಲ್ಲಿ ಕಾಳೀಮಂದಿರದ ಮಂದಿ ಹೇಳಿದರು, ಶ್ರೀರಾಮಕೃಷ್ಣರು ಕೆಲವೇ ದಿನಗಳ ಹಿಂದೆ ತೀರಿಕೊಂಡಿದ್ದಾರೆ ಎಂಬುದಾಗಿ. ಅದನ್ನು ಕೇಳಿದೊಡನೆಯೇ ಸಾಧುವಿಗೆ ಹೃದಯಾಘಾತವಾಯಿತು, "ಏನು? ತೀರಿಕೊಂಡರೆ? ನಾನು ಅಷ್ಟೊಂದು ದೂರದ ಅಯೋಧ್ಯೆಯಿಂದ ಅವರನ್ನು ನೋಡುವ ಸಲುವಾಗಿ ಬರಿಗಾಲಲ್ಲೇ ನಡೆದು ಬಂದೆನಲ್ಲಾ! ಎಷ್ಟೊಂದು ಕಷ್ಟಪಟ್ಟೆ ! ಆದರೆ ಈಗ ಅವರು ದೇಹ ಬಿಟ್ಟರಲ್ಲ !" ಎಂದು ಆತ ಅಳತೊಡಗಿದ.

ಕಾಳೀಮಂದಿರದ ಮುಖ್ಯಸ್ಥರೊಬ್ಬರು ಅವನಿಗೆ ಊಟ ತರಿಸಿಕೊಟ್ಟರೆ, ಅವನು ಬೇಡವೆಂದ. ಅವನು ಪಂಚವಟಿಗೆ ಹೋಗಿ ಎರಡು ಮೂರು ದಿನ ಅಲ್ಲಿ ಉಪವಾಸವಿದ್ದ. ಒಂದು ದಿನ ರಾತ್ರಿ ಅವನಿಗೆ ಶ್ರೀರಾಮಕೃಷ್ಣರು ಕಾಣಿಸಿಕೊಂಡು, "ತುಂಬಾ ದಿನಗಳಿಂದ ನೀನು ಏನನ್ನೂ ತಿಂದಿಲ್ಲ. ನಿನಗಾಗಿ ನಾನು ಈ ಪಾಯಸ ತಂದಿದ್ದೇನೆ ಇದನ್ನು ತೆಗೆದುಕೋ" ಎಂದರು. ಆ ಸಾಧುವಿಗೆ ಪಾಯಸವನ್ನು ಉಣಿಸಿ ಶ್ರೀರಾಮಕೃಷ್ಣರು ಅದೃಶ್ಯರಾದರು.

ಮರುದಿನ ನಾನು ಪಂಚವಟಿಗೆ ಹೋದೆ. ಆ ಸಾಧು ಆನಂದದಿಂದ ತುಂಬಿತುಳುಕುತ್ತಿದ್ದ. 'ನಿನಗೇನಾಯಿತು? ನಿನ್ನೆ ಅಷ್ಟೊಂದು ಅಳುತ್ತಿದ್ದೆ. ಈಗ ಇಷ್ಟೊಂದು ಆನಂದದಿಂದ ಇದ್ದೀಯಲ್ಲಾ?' ಎಂದು ನಾನು ಕೇಳಿದೆ. ಆಗ ಅವನು ನನಗೆ ನಡೆದ ವಿಷಯವನ್ನೆಲ್ಲ ತಿಳಿಸಿದ. ಅವನಿಗೆ ಶ್ರೀರಾಮಕೃಷ್ಣರು ಪಾಯಸವನ್ನು ಕೊಟ್ಟಿದ್ದ ಮಣ್ಣಿನ ಪಾತ್ರೆಯನ್ನು ನನಗೆ ತೋರಿಸಿದ".

ಆ ಮಣ್ಣಿನ ಪಾತ್ರೆ ರಾಮಲಾಲನ ಬಳಿ ತುಂಬಾ ಸಮಯ ಇತ್ತು, ಆದರೆ ಆ ನಂತರ ಅದು ನಾಶವಾಯಿತು. *

***('Sri Ramakrishna Saves' ಪುಸ್ತಕದಿಂದ, Ramakrishna Math, Hyderabad 500 029)***

# ಚಾರಿತ್ರ್ಯದ ಬೆಳವಣಿಗೆ ಮತ್ತು ರಾಷ್ಟ್ರ ನಿರ್ಮಾಣಕ್ಕಾಗಿ ಶಿಕ್ಷಣ

ಭಾಗ ೧

ಸ್ವಾಮಿ ರಂಗನಾಥಾನಂದ

ಅನುವಾದ: ಸ್ವಾಮಿ ವೀರೇಶಾನಂದ

ರಾಮಕೃಷ್ಣ ಮಹಾಸಂಘದ ೧೩ನೇ ಪರಮಾಧ್ಯಕ್ಷರಾಗಿದ್ದ ಶ್ರೀಮತ್ ಸ್ವಾಮಿ ರಂಗನಾಥಾನಂದಜಿ ಮಹಾರಾಜ್ ಅವರು ೩.೭.೧೯೯೨ರಂದು ಮೈಸೂರಿನ ರಾಮಕೃಷ್ಣ ವಿದ್ಯಾಶಾಲೆಯ ಪಿ.ಯು. ವಿದ್ಯಾರ್ಥಿಗಳ ವಾರ್ಷಿಕ ತರಬೇತಿ ಶಿಬಿರದಲ್ಲಿ ನೀಡಿದ ಭಾಷಣವು **"Education for Character Development and National Building"** ಎಂಬ ಪುಸ್ತಿಕೆಯ ರೂಪದಲ್ಲಿ ಮುದ್ರಿತವಾಗಿದ್ದು, ಅದರ ಅನುವಾದವನ್ನಿಲ್ಲಿ ಪ್ರಕಟಿಸುತ್ತಿದ್ದೇವೆ. ಶ್ರೇಷ್ಠ ಚಿಂತಕರೂ, ವಾಗ್ಮಿಗಳೂ ಆಗಿದ್ದ ಸ್ವಾಮೀಜಿಯವರು ದೇಶದುದ್ದಗಲ ಹಾಗೂ ವಿದೇಶಗಳಲ್ಲಿ ವಿಚಾರಪ್ರಚೋದಕವಾದ, ಪ್ರಬುದ್ಧವಾದ ಅನೇಕ ಪ್ರವಚನಗಳನ್ನು ನೀಡಿದ್ದಾರೆ. ಅವರ ಪ್ರವಚನ, ಲೇಖನಗಳ ಹಲವಾರು ಸಂಪುಟಗಳು ಹೊರಬಂದಿವೆ. ಅನುವಾದಕರು ಬೇಲೂರು ಮಠದಲ್ಲಿರುವ ಬ್ರಹ್ಮಚಾರಿಗಳ ಪ್ರಶಿಕ್ಷಣ ಕೇಂದ್ರದಲ್ಲಿ ಆಚಾರ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಉತ್ತಮ ವಾಗ್ಮಿಯೂ, ವಿದ್ವಾಂಸರೂ ಆಗಿರುವ ಸ್ವಾಮೀಜಿಯವಯರು 'ವಿವೇಕಪ್ರಭ'ದ ಹಿಂದಿನ ಸಂಪಾದಕರಾಗಿದ್ದರು.

## ನನ್ನ ಪ್ರಿಯ ಯುವ ಸ್ನೇಹಿತರೇ,

ನಿಮ್ಮೆಲ್ಲರೊಂದಿಗೆ ಕೆಲವು ನಿಮಿಷಗಳ ಕಾಲ ಕಳೆಯಲು ನನಗೆ ಸಂತೋಷವಾಗುತ್ತಿದೆ. ಇಂದು ನಮ್ಮ ದೇಶವು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ ಎಂದು ನಮಗೆ ಗೊತ್ತು. ನಮ್ಮ ಶಿಕ್ಷಣವು ಈ ಸಮಸ್ಯೆಗಳ ಪರಿಹಾರಕ್ಕೆ ನಮ್ಮನ್ನು ಸನ್ನದ್ಧರನ್ನಾಗಿ ಮಾಡಬೇಕು. ಆದರೆ ಹಾಗೆ ಆಗುತ್ತಿಲ್ಲ. ನೀವೆಲ್ಲರೂ ಮೈಸೂರಿನ ರಾಮಕೃಷ್ಣ ವಿದ್ಯಾಶಾಲೆಯಂಥ, ಆಧ್ಯಾತ್ಮಿಕತೆಗೆ ಮಹತ್ವ ನೀಡುವ ಶಿಕ್ಷಣ ಸಂಸ್ಥೆಯಲ್ಲಿ ಅಧ್ಯಯನ ಮಾಡುತ್ತಿದ್ದೀರಿ. ದೇಶ ಎದುರಿಸುತ್ತಿರುವ ಗಂಭೀರ ಪರಿಸ್ಥಿತಿಯ ಬಗ್ಗೆ ಆಳವಾಗಿ ಆಲೋಚಿಸುವ, ಮತ್ತು ರಾಷ್ಟ್ರೀಯ ಸಮಸ್ಯೆಗಳಿಗೆ ಶಿಕ್ಷಣವು ಹೇಗೆ ಪರಿಹಾರವನ್ನು ಸೂಚಿಸಲು ಸಮರ್ಥವಾಗಿದೆ ಎಂದು ಕಂಡುಹಿಡಿದುಕೊಳ್ಳುವ ಅವಕಾಶವನ್ನು ಇಲ್ಲಿ ನೀವು ಪಡೆದುಕೊಂಡಿದ್ದೀರಿ.

## ನಮ್ಮ ರಾಷ್ಟ್ರೀಯ ವ್ಯಾಧಿ

ಇಂದು ನಮ್ಮ ದೇಶದಲ್ಲಿ ಲಕ್ಷಾಂತರ ಮಂದಿ ಹಸಿವೆಯಿಂದ ಕಂಗೆಟ್ಟಿದ್ದಾರೆ. ಇನ್ನೂ ಲಕ್ಷಾಂತರ ಜನರು ನಮಗೆ ದೊರೆತ ಸ್ವಾತಂತ್ರ್ಯದ ಫಲವನ್ನು ಅನುಭವಿಸುವಲ್ಲಿ ವಿಫಲರಾಗಿದ್ದಾರೆ. ಉನ್ನತ ವರ್ಗದವರೆನಿಸಿಕೊಂಡ ಜನರು ಸ್ವಾತಂತ್ರ್ಯದ ಎಲ್ಲ ಫಲ ಗಳನ್ನೂ ಕಸಿದುಕೊಂಡಿದ್ದಾರೆ. ನಮ್ಮ ಜನರಲ್ಲಿ ಇಲ್ಲದಿರುವುದಾದರೂ ಏನು? ನಮ್ಮಲ್ಲಿ ಸಾಕಷ್ಟು ಹಣ ಮತ್ತು ಸಂಪನ್ಮೂಲಗಳಿವೆ. ನಮ್ಮ ದೇಶದ ಮೊದಲ ಪಂಚವಾರ್ಷಿಕ ಯೋಜನೆಗೆ ಖರ್ಚು ಮಾಡಿದ ವೆಚ್ಚ ೨೦೦೦ ಕೋಟಿ ರೂಪಾಯಿಗಳು. ಈ ಬಂಡವಾಳವು ಒಂದು ಪಂಚವಾರ್ಷಿಕ ಯೋಜನೆಯಿಂದ ಇನ್ನೊಂದು ಪಂಚವಾರ್ಷಿಕ ಯೋಜನೆಗೆ ಹೆಚ್ಚಾಗುತ್ತ ಬಂದು, ಎಂಟನೆಯ ಪಂಚವಾರ್ಷಿಕ ಯೋಜನೆಗೆ ೨,೮೦,೦೦೦ ಕೋಟಿ ರೂಪಾಯಿಗಳ ಭಾರೀ ಮೊತ್ತವನ್ನು ತಲುಪಿದೆ. ಇಷ್ಟಾಗಿಯೂ ನಮ್ಮಲ್ಲಿ ಏಕಿಷ್ಟು ಬಡತನ? ಲಕ್ಷಾಂತರ ಜನರು ಏಕೆ ಹೀಗೆ ನರಳುತ್ತಿದ್ದಾರೆ? ಈ ಬಗೆಯ ಆಲೋಚನೆಯನ್ನು ನೀವು ಮಾಡಬೇಕು. ಮತ್ತು ಈ ಸಮಸ್ಯೆಗೆ ಉತ್ತರವನ್ನು ಕಂಡುಕೊಳ್ಳಬೇಕು. ಈ ಆಲೋಚನಾ ವಿಧಾನವನ್ನು ಮಾಡುವ ಕ್ರಿಯೆಯಲ್ಲಿ ನಾನು ನಿಮಗೆ ಸಹಾಯ ಮಾಡುತ್ತೇನೆ.



## ಚಾರಿತ್ರ್ಯ ಮತ್ತು ಅದರ ಮಹತ್ವ

ಇಂದು ನಮ್ಮ ರಾಷ್ಟ್ರೀಯ ಚಾರಿತ್ರ್ಯದ ದುಃಸ್ಥಿತಿ ಈ ಮಟ್ಟಕ್ಕೆ ಇಳಿದಿದೆ. ನಿಜವಾದ ಚಾರಿತ್ರ್ಯವು ನಮ್ಮ ಜೀವನದ ಅಂಗ ವಾಗಿದ್ದೇ ಆದರೆ, ಇಷ್ಟುಹೊತ್ತಿಗೆ ನಾವು ನಮ್ಮ ದೇಶವನ್ನು ಸಮೃದ್ಧಿಯ ಶಿಖರಕ್ಕೆ ಕೊಂಡೊಯ್ಯಬಹುದಾಗಿತ್ತು. ಚಾರಿತ್ರ್ಯ ವೊಂದು ಇದ್ದರೆ, ಒಂದು ರೂಪಾಯಿಯ ಬಂಡವಾಳ ಹೂಡು ವಿಕೆಯಿಂದ ಜನರಿಗೆ ಹತ್ತು ರೂಪಾಯಿಗಳ ಅನುಕೂಲತೆ ಗಳನ್ನು ಮಾಡಿಕೊಡಬಹುದು. ಚಾರಿತ್ರ್ಯವಿಲ್ಲದಿದ್ದರೆ, ನೂರು ರೂಪಾಯಿಯು ಹತ್ತು ರೂಪಾಯಿಯ ಮೌಲ್ಯವುಳ್ಳದ್ದಾಗಿ ಬಿಡುತ್ತದೆ. ಆದರೆ ನಮ್ಮ ಮುಂದಿರುವ ಸವಾಲೆಂದರೆ, ಈ ಬಗೆಯ ಚಾರಿತ್ರ್ಯವನ್ನು ಬೆಳೆಸಿಕೊಳ್ಳುವುದು ಹೇಗೆ ಎನ್ನುವುದು. ಮಾನವ–ನಿರ್ಮಾಣ ಹಾಗೂ ಚಾರಿತ್ರ್ಯ–ನಿರ್ಮಾಣ ಶಿಕ್ಷಣ ವನ್ನು ನೀಡುವ ಸ್ವಾಮಿ ವಿವೇಕಾನಂದರ ಮಹಾನ್ ಆದರ್ಶದ ಮಹತ್ವವಿರುವುದು ಇಲ್ಲಿಯೇ.

'ಚಾರಿತ್ರ್ಯ' ಎಂದರೆ ನಿಜವಾಗಿಯೂ ಏನು? ಸಮಾಜಮುಖಿಯಾದ ಇಚ್ಛಾಶಕ್ತಿಯೇ ಕೇಂದ್ರವಾಗಿ ಉಳ್ಳದ್ದು ಚಾರಿತ್ರ್ಯವೆನಿಸಿಕೊಳ್ಳುತ್ತದೆ. ನಿಮ್ಮ ಇಚ್ಛಾಶಕ್ತಿಯು ಸಾಮಾಜಿಕ ಕಲ್ಯಾಣವನ್ನೇ ಧ್ಯೇಯವನ್ನಾಗಿ ಇಟ್ಟುಕೊಂಡಿರಬೇಕು. ಆಗ ಮಾತ್ರವೇ ನೀವು ಚಾರಿತ್ರ್ಯವನ್ನು ಬೆಳೆಸಿಕೊಳ್ಳಲು ಸಾಧ್ಯ. ಇದರಿಂದ, 'ಸಾಮಾಜಿಕ ಒಲವು' ಎನ್ನುವುದರ ಅರ್ಥ, ನಮ್ಮ ಸ್ವಾರ್ಥವನ್ನು ಕಡಮೆ ಮಾಡಿಕೊಳ್ಳುವುದೇ ಆಗಿದೆ ಎನ್ನುವುದು ಸ್ಪಷ್ಟವಾಗುತ್ತದೆ. ಸಾಮಾನ್ಯವಾಗಿ, ನಾವು ನಮ್ಮ ಬಗ್ಗೆ ಮಾತ್ರವೇ ಆಲೋಚಿಸುತ್ತೇವೆ, ಗಮನ ಹರಿಸುತ್ತೇವೆ. ಅದು ನಿಲ್ಲಬೇಕು. ನಾವು ಇತರರ ಬಗ್ಗೆಯೂ ಗಮನ ಹರಿಸಬೇಕು. ಏಕೆಂದರೆ, ವ್ಯಕ್ತಿಗಳು ಕೂಡಿಕೊಂಡಿರುವ ಒಂದು ಸಮಾಜದಲ್ಲಿ ನಾವು ಜೀವಿಸುತ್ತಿದ್ದೇವೆ. ಉದಾಹರಣೆಗೆ, ನಾವು ಒಂದು ಸರ್ಕಾರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇವೆ ಎಂದಿಟ್ಟುಕೊಳ್ಳಿ. ಅಲ್ಲಿ ನಾವು ಜನಸೇವಕರಾಗಿ, ಅವರ ಒಳಿತಿಗಾಗಿ ಕೆಲಸ ಮಾಡುತ್ತೇವೆ – ಎಂಬ ಭಾವನೆಯನ್ನು ಭಾರತದ ಜನತೆ ಇನ್ನೂ ಸಾಕಾರಗೊಳಿಸಿಕೊಂಡಿಲ್ಲ. ಇತರ ದೇಶಗಳ ಜನರು ಇದನ್ನು ಅರ್ಥಮಾಡಿಕೊಂಡಿದ್ದಾರೆ. ಅದಕ್ಕೆಂದೇ ಆ ದೇಶಗಳಲ್ಲಿ ಬಡತನ ಕಂಡುಬರುವುದಿಲ್ಲ, ಮತ್ತು ಅವು ಬಹಳಷ್ಟು ಅಭಿವೃದ್ಧಿಯನ್ನು ಸಾಧಿಸಿವೆ. ತಮ್ಮ ಭೌತಿಕ ಮತ್ತು ಬೌದ್ಧಿಕ ಅಭಿವೃದ್ಧಿಯ ಜೊತೆಜೊತೆಗೆ ಆ ದೇಶಗಳು, ಇತರರ ಬಗೆಗಿನ ಕಳಕಳಿಯನ್ನೇ ಕೇಂದ್ರಬಿಂದುವಾಗಿಟ್ಟುಕೊಂಡು ಚಾರಿತ್ರ್ಯ ಶಕ್ತಿಯನ್ನೂ ಕೂಡ ಬೆಳೆಸಿಕೊಂಡಿವೆ. ಇದು ನಮ್ಮ ದೇಶದಲ್ಲಿ ಕಾಣಬರುವುದಿಲ್ಲ. ನೀವು ಒಂದು ಕಚೇರಿಗೆ ಹೋದಾಗ, ಅಲ್ಲಿನ ಒಬ್ಬ ಗುಮಾಸ್ತನಿಗೆ ನೀವು ಲಂಚವನ್ನು ಕೊಡದೆ ಇದ್ದರೆ, ಅವನು ನಿಮ್ಮ ಬಗ್ಗೆ ಗಮನ ಹರಿಸುವುದೇ ಇಲ್ಲ. ನಮ್ಮದು ಇದೆಂಥ ಸಂಸ್ಕೃತಿ! ಎಂಥ ಕೀಳುಮಟ್ಟದ ಸಂಸ್ಕೃತಿ ಇದು!

## ನಿಜವಾದ ಧರ್ಮ

ಮೇಲಿನ ಕಾರಣದಿಂದ, ನಾವು ಚಾರಿತ್ರ್ಯಸಂಪನ್ನರಾಗಬೇಕೆಂಬುದು ಸ್ಪಷ್ಟವಾಗುತ್ತದೆ. ಇಂದು ನಾವು ಯಾವುದನ್ನು 'ಧರ್ಮ'ವೆಂದು ಕರೆಯುತ್ತೇವೆಯೋ, ಅದು ಕೆಡುಕಿನಿಂದ ಕೂಡಿದ್ದು; ಅಪಾಯಕಾರಿಯಾದದ್ದು ಮತ್ತು ನಿರರ್ಥಕವಾದದ್ದು. ಆಚರಣೆಗಳು, ಪೂಜಾಕ್ರಿಯೆಗಳು ಹಾಗೂ ಪವಾಡಗಳು – ಇವೆಲ್ಲ ನಮ್ಮನ್ನು ಉತ್ಕೃಷ್ಟ ಚಾರಿತ್ರ್ಯದೆಡೆಗೆ ಕೊಂಡೊಯ್ಯಬೇಕು. ಇಲ್ಲದಿದ್ದರೆ ಇವಾವುದಕ್ಕೂ ಯಾವುದೇ ಅರ್ಥವಿಲ್ಲ. ಈ ಅಭಿಪ್ರಾಯವನ್ನೇ ಸ್ವಾಮಿ ವಿವೇಕಾನಂದರು ೧೮೯೫ ರ ಮಾರ್ಚ್ ೨೧ರಂದು ಅಮೇರಿಕದ ಭಕ್ತೆ ಮಿಸೆಸ್ ಓಲೆ ಬುಲ್ ಎಂಬಾಕೆಗೆ ಬರೆದ ತಮ್ಮ ಪತ್ರದಲ್ಲಿ ವ್ಯಕ್ತಪಡಿಸಿದ್ದಾರೆ:

*'ಮನುಷ್ಯ–ಮನುಷ್ಯರ ನಡುವಿನ ಸಹೋದರ ಭಾವನೆಗಳಿಗೆ ಈ ಹಿಂದೂ, ಕ್ರಿಶ್ಚಿಯನ್ ಮುಂತಾದ ಹೆಸರುಗಳು ದೊಡ್ಡ ಆತಂಕಗಳೆಂದು ನನ್ನ ಗುರುಗಳು (ಶ್ರೀರಾಮಕೃಷ್ಣರು) ಹೇಳುತ್ತಿದ್ದರು. ಮೊದಲು ನಾವು ಅವುಗಳನ್ನು ಮುರಿಯಲು ಯತ್ನಿಸಬೇಕು. ಅವು ತಮ್ಮಲ್ಲಿದ್ದ ಒಳ್ಳೆಯ ಶಕ್ತಿಗಳನ್ನೆಲ್ಲ ಕಳೆದುಕೊಂಡು ಈಗ ಕೇವಲ ನಾಶಕಾರಕ ಶಕ್ತಿಯನ್ನು ಮಾತ್ರ ಹೊಂದಿವೆ. ನಮ್ಮಲ್ಲಿ ಅತ್ಯಂತ ಉತ್ತಮರಾದವರೂ ಅದರ ಭಯಂಕರ ಪ್ರಭಾವಕ್ಕೆ ಒಳಗಾಗಿ ಪಿಶಾಚಿಗಳಂತೆ ಆಗುತ್ತೇವೆ. ನಾವು ಶಕ್ತಿಮೀರಿ ಪ್ರಯತ್ನಿಸಿ ಜಯಶಾಲಿಗಳಾಗಬೇಕು.*

*'ಯಾರು ಮಾನವಕುಲಕ್ಕೆ ಸಹಾಯ ಮಾಡಬೇಕೆಂದಿರುವರೋ ಅವರೆಲ್ಲಾ ತಮ್ಮ ಸುಖ, ದುಃಖ, ಹೆಸರು, ಕೀರ್ತಿ ಮತ್ತು ಇತರ ಎಲ್ಲಾ ಬಗೆಯ ಆಸೆ–ಆಕಾಂಕ್ಷೆಗಳನ್ನೂ, ಗಂಟುಮೂಟೆ ಕಟ್ಟಿ ಸಮುದ್ರಕ್ಕೆ ಎಸೆದು ಭಗವಂತನೆಡೆಗೆ ಬರಬೇಕು. ಇದನ್ನೇ ಎಲ್ಲಾ ಆಚಾರ್ಯರೂ ಉಪದೇಶಿಸಿದ್ದರು ಮತ್ತು ಇದರಂತೆಯೇ ಅವರೂ ಮಾಡಿದರು.' (ಸ್ವಾಮಿ ವಿವೇಕಾನಂದರ ಪತ್ರಮಾಲೆ, ಪು. ೨೦೫)*

ಇದಲ್ಲದೆ, ೧೮೯೬, ಜೂನ್ ೧೭ರಂದು ಲಂಡನ್ನಿನಿಂದ ಭಗಿನಿ ನಿವೇದಿತೆಗೆ ಬರೆದ ತಮ್ಮ ಪತ್ರದಲ್ಲಿ ಸ್ವಾಮೀಜಿ ಹೀಗೆ ಬರೆಯುತ್ತಾರೆ:

*'ನನ್ನ ಆದರ್ಶವನ್ನು ನಿಜವಾಗಿ ಬಹಳ ಸ್ವಲ್ಪ ಪದಗಳಲ್ಲಿ ವ್ಯಕ್ತಪಡಿಸಬಹುದು. ಅದೇ, ಮಾನವನಿಗೆ ತನ್ನ ದೈವತ್ವವನ್ನು ಬೋಧಿಸುವುದು ಮತ್ತು ಅದನ್ನು ಜೀವನದ ಪ್ರತಿಯೊಂದು ಕ್ಷಣದಲ್ಲೂ ಹೇಗೆ ವ್ಯಕ್ತಗೊಳಿಸಬೇಕೆಂಬುದನ್ನು ತಿಳಿಸುವುದು.*

*'ಜಗತ್ತಿನ ಧರ್ಮಗಳೆಲ್ಲ ನಿಸ್ತೇಜವಾಗಿ ನಗೆಗೀಡಾಗಿವೆ. ಜಗತ್ತಿಗೆ ಬೇಕಾಗಿರುವುದು ಶುದ್ಧ ಚಾರಿತ್ರ್ಯ. ಯಾರ ಜೀವನದಲ್ಲಿ ನಿರಂತರವೂ ಪ್ರೇಮ, ನಿಃಸ್ವಾರ್ಥ, ತ್ಯಾಗಗಳು ನಂದಾದೀವಿಗೆಯಂತೆ ಉರಿಯುತ್ತಿವೆಯೋ, ಅಂತಹ ಪುಣ್ಯಾತ್ಮರು ಜಗತ್ತಿಗೆ ಬೇಕಾಗಿದ್ದಾರೆ. ಆ ಪ್ರೇಮವೇ ಪ್ರತಿಯೊಂದು ಮಾತಿನಿಂದಲೂ ಸಿಡಿಲಿನಂತಹ ಪರಿಣಾಮವನ್ನು ಉಂಟುಮಾಡಬಲ್ಲುದು.' (ಸ್ವಾಮಿ ವಿವೇಕಾನಂದರ ಪತ್ರಮಾಲೆ, ಪು. ೧೯೯–೨೦೦)*

## ದೇಶದ ಸಮಸ್ಯೆಗಳಿಗೆ ಪರಿಹಾರವಾಗಿ ವೇದಾಂತಜ್ಞಾನ

ಈ ಬಗೆಯ ಚಾರಿತ್ರ್ಯವರ್ಧನೆಗೆ ಸಾಧನವಾಗಿ ಸ್ವಾಮಿ ವಿವೇಕಾನಂದರು ವೇದಾಂತ ಸಂದೇಶವನ್ನು ನೀಡಿದ್ದಾರೆ. ವೇದಾಂತವೆಂದರೆ, ಉಪನಿಷತ್ತುಗಳ ಮಹಾನ್ ಬೋಧನೆಗಳು. ಈ ಉಪದೇಶಗಳು ಕೇವಲ ನಂಬಿಕೆಗೆ ಪ್ರಾಧಾನ್ಯ ನೀಡುವುದಿಲ್ಲ; ಬದಲಾಗಿ, ಧೈರ್ಯವಾಗಿ ಪ್ರಶ್ನಿಸುವಂತೆ, ಚರ್ಚೆ ಮಾಡುವಂತೆ ಮತ್ತು ನಾವೇ ಸ್ವತಃ ನೇರವಾಗಿ ಸತ್ಯವನ್ನು ಕಂಡುಕೊಳ್ಳುವಂತೆ ಉತ್ತೇಜಿಸುತ್ತವೆ, ಹಾಗೂ ಅದಕ್ಕನುಗುಣವಾಗಿ ಜೀವಿಸುವಂತೆ ಪ್ರೇರೇಪಿಸುತ್ತವೆ. ಇದೇ ಉಪನಿಷತ್ತುಗಳು ಮತ್ತು ಭಗವದ್ಗೀತೆಯ ವೈಜ್ಞಾನಿಕ ಮಹತ್ವ. ಈ ಮಹಾನ್ ಗ್ರಂಥಗಳಲ್ಲಿ ಋಷಿವರೇಣ್ಯರು ತಮ್ಮ ಸ್ವಂತ ಅನುಭವದ ಮೂಲಕ, ಚಾರಿತ್ರ್ಯವನ್ನು ರೂಪಿಸಿಕೊಳ್ಳಬಹುದಾದ ಖಚಿತ ಆಧಾರಸೂತ್ರವನ್ನು ಇಡೀ ಮಾನವತೆಗೆ ನೀಡಿರುವುದನ್ನು ಕಾಣಬಹುದು. ನಿತ್ಯಶುದ್ಧ, ನಿತ್ಯಮುಕ್ತ ಮತ್ತು ಅನಂತ ಆತ್ಮವು ನಮ್ಮಲ್ಲಿ ಪ್ರತಿಯೊಬ್ಬರಲ್ಲಿಯೂ ಸುಪ್ತವಾಗಿರುವುದು; ಅದು ನಮ್ಮ ಸಹಜ ಸ್ವರೂಪವೇ ಆಗಿದೆ. ಆ ದಿವ್ಯತೆಯ ಕಿಡಿ ಪ್ರತಿಯೊಬ್ಬರಲ್ಲಿಯೂ – ಕೇವಲ ಮಾನವಜೀವಿಗಳಲ್ಲಿ ಮಾತ್ರವಲ್ಲ, ಇತರೆಲ್ಲ ಜೀವರಾಶಿಗಳಲ್ಲಿಯೂ ಕೂಡ ಅಡಗಿದೆ. ಆದರೆ, ಮಾನವನು ಮಾತ್ರವೇ ಈ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳಲು ಜೈವಿಕವಾಗಿ ಸಮರ್ಥನಾಗಿದ್ದಾನೆ. ಈ ಸತ್ಯವನ್ನು ನೀವೇ

ಸ್ವತಃ ಕಂಡುಕೊಳ್ಳಬೇಕು. ಅದನ್ನು ನಿಮ್ಮ ಜೀವನದಲ್ಲಿ, ನಡವಳಿಕೆಯಲ್ಲಿ ಮತ್ತು ಹಾವಭಾವಗಳಲ್ಲಿ ವ್ಯಕ್ತಗೊಳಿಸಬೇಕು. ಈ ದೇಹ–ಮನಸ್ಸುಗಳ ಸಂಕೀರ್ಣದ ಹಿನ್ನೆಲೆಯಲ್ಲಿ ಅಗಾಧ ಆಧ್ಯಾತ್ಮಿಕ ಆಯಾಮವೊಂದಿದೆ. ಅದು ಅನಂತವಾಗಿದ್ದು, ನಮ್ಮೆಲ್ಲರಲ್ಲೂ ಸುಪ್ತವಾಗಿದೆ. ಆ ಏಕಮಾತ್ರ ಪರಿಶುದ್ಧ ಚೈತನ್ಯ ಅಥವಾ 'ಚಿತ್' ಅಂಶವೇ ನಿಮ್ಮಲ್ಲಿ, ನನ್ನಲ್ಲಿ ಮತ್ತು ಎಲ್ಲರಲ್ಲಿಯೂ ಇದೆ. ಹೀಗಾಗಿ ನಾವು ಆಧ್ಯಾತ್ಮಿಕವಾಗಿ ಒಂದೇ ಆಗಿದ್ದೇವೆ. ಇದೇ ವೇದಾಂತದ ಬೋಧನೆ. ಇದೇ ಅದ್ವೈತ ಸಿದ್ಧಾಂತ. ಈ ಬೋಧನೆಯನ್ನು ನಾವು ಭಗವದ್ಗೀತೆಯಲ್ಲಿಯೂ ನೋಡುತ್ತೇವೆ. ಚಾರಿತ್ರ್ಯದ ಬೆಳವಣಿಗೆಗೆ ಇದೇ ಆಧಾರ ಮತ್ತು ಆಕರವಾಗಬೇಕು. ಬರಿಯ ದೇಹಪ್ರಜ್ಞೆಯಿಂದ ಪ್ರತ್ಯೇಕತೆಯ ಭಾವನೆ ಹೊರಹೊಮ್ಮುತ್ತದೆ. ಆಗ ನಮ್ಮ ಭಾವನೆಗಳು ಸ್ವಾರ್ಥಮಯವೂ, ಸ್ವಕೇಂದ್ರಿತವೂ ಆಗಿಬಿಡುತ್ತವೆ. ಉದಾಹರಣೆಗೆ, ನನ್ನ ಭಾವನೆ ಹೇಗಿರಬೇಕೆಂದರೆ, ನಾನು ನಿಮ್ಮಲ್ಲಿ ಸಮಾನತೆಯನ್ನು ಹೊಂದಿರಬೇಕು. ಅದು ನಮ್ಮ ನಿತ್ಯನೂತನ ಆಧ್ಯಾತ್ಮಿಕ ಸ್ವರೂಪದಿಂದ ಮಾತ್ರವೇ ಮೂಡಿಬರಲು ಸಾಧ್ಯ. ಭೌತಿಕವಾಗಿ ನಾನು ನಿಮಗಿಂತ ಪ್ರತ್ಯೇಕವಾಗಿದ್ದೇನೆ, ನಿಜ. ನಾನು ಊಟ ಮಾಡಿದರೆ, ನಿಮಗೇನೂ ತೃಪ್ತಿಯಾಗದು. ನೀವು ಊಟ ಮಾಡಿದಾಗ, ನನಗೂ ತೃಪ್ತಿಯಾಗದು. ಈ ಅರ್ಥದಲ್ಲಿ ನಾವು ಬೇರೆಬೇರೆ ಎನ್ನುವುದು ಸರಿಯೇ. ಆದರೆ, ಅದು ಕೇವಲ ಭೌತಿಕ ನೆಲೆಗಟ್ಟಿನಲ್ಲಿ ಮಾತ್ರ. ಪರಿಶುದ್ಧ ಚೈತನ್ಯಸ್ವರೂಪವಾದ ಆತ್ಮಸ್ವರೂಪದ ಹಂತದಲ್ಲಿ ನಾವೆಲ್ಲರೂ ಒಂದೇ ಆಗಿದ್ದೇವೆ.

### ನಿಸ್ವಾರ್ಥತೆ ಮತ್ತು ಜೀನ್

ಈ ದೇಹವು ಜೀನ್‌ಗಳೆಂಬ ಆನುವಂಶಿಕ (genetic) ಅಣುಗಳ ಹಲವಾರು ಗುಂಪುಗಳಿಂದ ಮಾಡಲ್ಪಟ್ಟಿದೆ. ನಮ್ಮ ಭೌತಿಕ ಸ್ವಭಾವವು ನಮ್ಮನ್ನು ಆರೋಗ್ಯವಂತರನ್ನಾಗಿ ಮತ್ತು ಶಕ್ತಿವಂತರನ್ನಾಗಿ ಮಾಡಬಹುದು. ಆದರೆ ಅದು ನಮಗೆ ನೈತಿಕ ಮೌಲ್ಯಗಳನ್ನು ನೀಡಲಾರದು. ಜೀನ್‌ಗಳು ನಮಗೆ ಯಾವುದೇ ರೀತಿಯ ನೈತಿಕ ಮೌಲ್ಯಗಳನ್ನೂ ನೀಡಲಾರವು ಎಂದು ಜೀವಶಾಸ್ತ್ರ ಇಂದು ಪ್ರತಿಪಾದಿಸುತ್ತಿದೆ. ಅದಕ್ಕೆಂದೇ, ಜೀನ್‌ಗಳು ಸ್ವಭಾವತಃ ಸ್ವಾರ್ಥಿಗಳು ಎಂದು ಹೇಳಲಾಗುತ್ತದೆ. ಇದನ್ನು ಹೇಳಿದ್ದು ಒಬ್ಬ ವಿಜ್ಞಾನಿ. ಆತನ ಹೆಸರು ರಿಚರ್ಡ್ ಡಾಕಿನ್ಸ್ ಎಂದು. ೧೯೭೬ರಲ್ಲಿ ಪ್ರಕಟವಾದ ತನ್ನ Selfish Gene ಎಂಬ ಪುಸ್ತಕದಲ್ಲಿ ಆತ ಹೀಗೆ ಹೇಳಿದ್ದಾನೆ *(ಪುಟ ೨–೩, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ೧೯೮೦, ನೂತನ ಆವೃತ್ತಿ) :*

"ಈ ಪುಸ್ತಕದಲ್ಲಿ ಪ್ರತಿಪಾದಿಸಲಾಗಿರುವ ವಾದವೆಂದರೆ, ನಾವು ಮತ್ತು ಎಲ್ಲ ಪ್ರಾಣಿಗಳು ನಮ್ಮಲ್ಲಿರುವ ಜೀನ್‌ಗಳಿಂದ ಸೃಷ್ಟಿಸಲ್ಪಟ್ಟ ಯಂತ್ರಗಳು ಎಂಬುದು. ಚಿಕಾಗೋ ನಗರದ ಯಶಸ್ವಿ ರೌಡಿಗಳ ಹಾಗೆ, ನಮ್ಮ ಜೀನ್‌ಗಳು ಉಳಿದುಕೊಂಡು ಬಂದಿವೆ. ಕೆಲವೊಂದಂತೂ ಅತ್ಯಂತ ಸ್ಪರ್ಧಾತ್ಮಕವಾದ ಈ ಜಗತ್ತಿನಲ್ಲಿ ಲಕ್ಷಾಂತರ ವರ್ಷಗಳಿಂದಲೂ ಉಳಿದಿವೆ. ಹೀಗಾಗಿ ನಮ್ಮ ಜೀನ್‌ಗಳಲ್ಲಿ ಕೆಲವೊಂದು ನಿರ್ದಿಷ್ಟ ಗುಣಗಳು ಇವೆ ಎಂದು ನಾವು ಊಹಿಸಲು ಸಾಧ್ಯ. ಒಂದು ಯಶಸ್ವಿ ಜೀನ್‌ನಲ್ಲಿ ಇರಬಹುದಾದ ಪ್ರಧಾನ ಗುಣವೆಂದರೆ ನಿರ್ದಾಕ್ಷಿಣ್ಯವಾದ ಸ್ವಾರ್ಥ ಎಂದು ನಾನು ವಾದಿಸುತ್ತೇನೆ. ಈ ಜೀನ್‌ಗಳ ಸ್ವಾರ್ಥವು ಸಾಮಾನ್ಯವಾಗಿ ವೈಯಕ್ತಿಕ ನಡವಳಿಕೆಯಲ್ಲಿನ ಸ್ವಾರ್ಥಭಾವನೆಯ ಉದಯಕ್ಕೆ ಕಾರಣವಾಗುತ್ತದೆ. ಆದರೂ, ನಾವು ಮುಂದೆ ನೋಡುವಂತೆ, ಕೆಲವು ವಿಶೇಷ ಪರಿಸ್ಥಿತಿಗಳಿರುವುದನ್ನು ನಾವು ಗಮನಿಸಬಹುದು. ಅಂಥ ಪರಿಸ್ಥಿತಿಗಳಲ್ಲಿ ಪ್ರಾಣಿಗಳ ವೈಯಕ್ತಿಕ ನೆಲೆಯಲ್ಲಿ, ನಿಸ್ವಾರ್ಥತೆಯ ಸೀಮಿತ ಅಂಶವನ್ನು ಬೆಳೆಸಿಕೊಳ್ಳುವ ಮೂಲಕ, ತನ್ನ ಸ್ವಂತ ಸ್ವಾರ್ಥ ಗುರಿಗಳನ್ನು ಪರಿಣಾಮಕಾರಿಯಾಗಿ ಸಿದ್ಧಿಸಿಕೊಳ್ಳಲು ಯಾವುದೋ ಒಂದು ಜೀನ್ ಶಕ್ತವಾಗುತ್ತದೆ. ಈ ಹಿಂದಿನ ವಾಕ್ಯಗಳಲ್ಲಿ **'ವಿಶೇಷ'** ಮತ್ತು **'ಸೀಮಿತ'** ಎಂಬ ಪದಗಳು ಮುಖ್ಯವಾದುವು. ನಾವೆಷ್ಟೇ ವಿಶ್ವಾಸವಿಡಲು ಇಚ್ಛಿಸುವುದಾದರೂ, 'ವಿಶ್ವಪ್ರೇಮ' ಮತ್ತು 'ಒಟ್ಟಾರೆ ಜೀವಪ್ರವರ್ಗವೊಂದರ (species) ಒಳಿತು' ಎಂಬ ಕಲ್ಪನೆಗಳು ಜೈವಿಕ ವಿಕಾಸಕ್ಕೆ ಒಳಪಡುವಂಥವು ಎನ್ನುವುದು ಸಮಂಜಸವಲ್ಲ."

"ಈ ಪುಸ್ತಕವು ಯಾವುದರ ಬಗ್ಗೆ ಅಲ್ಲ ಎನ್ನುವುದನ್ನು ನಾನು ಮೊದಲು ಸ್ಪಷ್ಟಪಡಿಸುತ್ತೇನೆ. ಜೈವಿಕ ವಿಕಾಸದ ಮೇಲೆ ಆಧರಿಸಿದ ನೈತಿಕತೆಯನ್ನು ನಾನು ಪ್ರತಿಪಾದಿಸುವುದಿಲ್ಲ ಎನ್ನುವುದೇ ಅದು.

"ಜೀನ್‌ಗಳಲ್ಲಿ ಕಂಡುಬರುವ ಸಾರ್ವತ್ರಿಕ ನಿರ್ದಾಕ್ಷಿಣ್ಯ ಸ್ವಾರ್ಥತೆಯ ನಿಯಮದ ಮೇಲೆ ಆಧರಿಸಿದ ಮಾನವ ಸಮಾಜವು, ಬದುಕಲು ಅತ್ಯಂತ ಅಸಹ್ಯವಾದಂಥ ಸಮಾಜವಾಗುವುದು ಎನ್ನುವುದು ನನ್ನ ಸ್ವಂತ ಭಾವನೆ. ಇದಕ್ಕೆ ಸಂಬಂಧಿಸಿದಂತೆ ನಾನು ಒಂದು ಎಚ್ಚರಿಕೆಯನ್ನು ನೀಡಲೇಬೇಕು. ನಾನು ಇಚ್ಛಿಸಿದ ಹಾಗೆ, ವ್ಯಕ್ತಿಗಳು ಉದಾರ ಮತ್ತು ನಿಸ್ವಾರ್ಥ ಮನೋಭಾವದಿಂದ ಪರಸ್ಪರ ಸಹಕರಿಸುವ ಸಮಾಜವನ್ನು ಕಟ್ಟಲು ನೀವೂ ಇಚ್ಛಿಸುವಿರಾದರೆ, ನಮ್ಮ ಈ ಜೈವಿಕ ಸ್ವಭಾವದಿಂದ ಕಿಂಚಿತ್ತೂ ಸಹಾಯವನ್ನು ಅಪೇಕ್ಷಿಸದಿರಿ. ನಾವು ಪರೋಪಕಾರ ಮನೋಭಾವ ಮತ್ತು ಉದಾರತೆಗಳನ್ನು ಬೋಧಿಸಲು ಪ್ರಯತ್ನಪಡೋಣ. ಏಕೆಂದರೆ, ಜೈವಿಕವಾಗಿ ನಾವು ಸ್ವಾರ್ಥಿಗಳಾಗಿಯೇ ಹುಟ್ಟಿರುತ್ತೇವೆ. ನಮ್ಮ ಜೀನ್‌ಗಳು ಏನು ಮಾಡುತ್ತವೆ ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸೋಣ. ಏಕೆಂದರೆ, ಅವುಗಳ ಕುಹಕ ಯೋಜನೆಗಳನ್ನು ಪಲ್ಲಟ ಮಾಡುವ ಅವಕಾಶ ಆಗ ನಮಗೆ ಪ್ರಾಪ್ತವಾಗುತ್ತದೆ. ಇದನ್ನು (ಮಾನವನಲ್ಲದೆ) ಇನ್ನಾವ ಜೀವಪ್ರಭೇದವೂ ತಾನು ಸಾಧಿಸುತ್ತೇನೆಂಬ ಮಹತ್ವಾಕಾಂಕ್ಷೆಯನ್ನು ಹಿಂದೆಂದೂ ಹೊಂದಿರಲಿಲ್ಲ."



ಇಲ್ಲಿ ಲೇಖಕ ಹೇಳುವುದನ್ನು ಗಮನಿಸಿ: "ನಾವು ಪರೋಪಕಾರ ಮನೋಭಾವ ಮತ್ತು ಉದಾರತೆಗಳನ್ನು ಬೋಧಿಸಲು ಪ್ರಯತ್ನಪಡೋಣ. ಏಕೆಂದರೆ, ಜೈವಿಕವಾಗಿ ನಾವು ಸ್ವಾರ್ಥಿಗಳಾಗಿಯೇ ಹುಟ್ಟಿರುತ್ತೇವೆ."

## ನಮ್ಮ ಅಂತರಂಗದಲ್ಲಿ ಆಳವಾಗಿ ಧುಮುಕುವುದು

ಚಾರಿತ್ರ್ಯಕ್ಕೆ ಬೇಕಾದ ಶಿಕ್ಷಣವನ್ನು ನಾವು ಎಲ್ಲಿಂದ ಪಡೆದುಕೊಳ್ಳಬಹುದು? ಭಾರತದ ಪ್ರಾಚೀನ ಋಷಿಗಳು ಈ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದರು. ಈಗ ನಾವು ನಮ್ಮ ಅಂತರಂಗದಲ್ಲಿಯೇ ಇದಕ್ಕಾಗಿ ಅನ್ವೇಷಣೆಯನ್ನು ಮಾಡಲು ಆರಂಭಿಸೋಣ. ನಮ್ಮ ಭೌತಿಕ ಪ್ರಕೃತಿಗಿಂತ ಗಾಢವಾದ ಆಯಾಮವೊಂದಿದೆ. ಹಿಂದಿನ ಕಾಲದ ಪಾಶ್ಚಾತ್ಯ ವಿಜ್ಞಾನವು ಪ್ರಕೃತಿಯ ಮೇಲ್ಪದರವನ್ನು ಮಾತ್ರ ಪರಿಗಣನೆಗೆ ತಂದುಕೊಂಡಿತ್ತು. ಆದರೆ ನಂತರದ ಕಾಲದಲ್ಲಿ, ಪ್ರಕೃತಿಯ ಗಾಢವಾದ ಆಳವನ್ನು ಅದು ಅನ್ವೇಷಿಸತೊಡಗಿತು. ಉದಾಹರಣೆಗಾಗಿ, 'ಶಕ್ತಿ' ಅಥವಾ 'ಬಲ'ದ ಉದಾಹರಣೆಯನ್ನೇ ತೆಗೆದುಕೊಳ್ಳಿ. ವಿಜ್ಞಾನವು ಮಾನವ ಜನಾಂಗಕ್ಕೆ ಮೊದಲು ನೀಡಿದ್ದು ಉರುವಲು ಶಕ್ತಿಯನ್ನು ಮಾತ್ರ. ಆದರೆ ಅದು ಬಹಳ ಅಲ್ಪವಾದುದು. ಹೀಗಾಗಿ ವಿಜ್ಞಾನವು ಪ್ರಕೃತಿಯೊಳಗೆ ಮತ್ತೂ ಆಳವಾಗಿ ಅನ್ವೇಷಣೆ ನಡೆಸಿ, ಇದಕ್ಕಿಂತ ಪ್ರಬಲವೂ, ಸೂಕ್ಷ್ಮವೂ ಆದ ವಿದ್ಯುಚ್ಛಕ್ತಿಯನ್ನು ಕಂಡುಹಿಡಿಯಿತು. ಆದರೆ ವಿಜ್ಞಾನ ಅಷ್ಟಕ್ಕೇ ತೃಪ್ತಿಹೊಂದಲಿಲ್ಲ. ಅದು ಘೋಷಿಸಿತು, "ಇನ್ನೂ ಪ್ರಕೃತಿಯಾಳಕ್ಕೆ ಹೋಗುತ್ತೇನೆ" ಎಂದು. ಈ ಪ್ರಯತ್ನದ ಫಲವಾಗಿ ಅಣುಶಕ್ತಿಯನ್ನು ಕಂಡುಹಿಡಿಯಿತು. ಹೀಗೆ ಭೌತಿಕ ಪ್ರಕೃತಿಯ ಅಂತರಾಳದ ಅನ್ವೇಷಣೆಯನ್ನೇ ಪಾಶ್ಚಾತ್ಯ ವಿಜ್ಞಾನವು ಕೈಗೊಂಡಿತು ಎನ್ನಬಹುದು. ಉಪನಿಷತ್ತಿನ ಋಷಿಗಳು ನಾಲ್ಕು ಸಾವಿರ ವರ್ಷಗಳ ಹಿಂದೆ, ಈ ಬಗೆಯ ಅನ್ವೇಷಣೆಯನ್ನೇ ಮಾನವಜೀವಿಯ ವಿಷಯದಲ್ಲಿ, ಮಾನವ ಸ್ವಭಾವದ ಅಂತರಾಳದಲ್ಲಿ ಕೈಗೊಂಡರು.

## ನಮ್ಮ ನೈಜ ಸ್ವಭಾವ

"ಇನ್ನು ನಾವು ಮಾನವಜೀವಿಯ ಅಂತರಾಳವನ್ನು ಹೊಕ್ಕು ನೋಡೋಣ" ಎಂದು ಆ ಋಷಿಗಳು ತಮಗೆ ತಾವೇ ಚಿಂತಿಸಿದರು. ಅದರಲ್ಲಿ ಯಾವ ಯಾವ ಸತ್ಯಗಳು, ಯಾವ ಯಾವ ಶಕ್ತಿಗಳು ಅಡಗಿವೆ ಎಂದು ಕಂಡುಕೊಂಡರು. ಮಾನವ ವ್ಯಕ್ತಿತ್ವದ ಮೇಲ್ಪದರದಲ್ಲಿ ನಮಗೆ ಕಾಣುವುದು ದೇಹ, ಮಾಂಸಖಂಡಗಳು ಮತ್ತಿತರ ಭಾಗಗಳಿಂದ ಕೂಡಿದ ಜೈವಿಕ ವ್ಯವಸ್ಥೆ. ಇನ್ನೂ ಸ್ವಲ್ಪ ಆಳವಾಗಿ ಕೆದಕಿ ನೋಡಿದಾಗ, ಋಷಿಗಳು ಕಂಡುಕೊಂಡಿದ್ದೇನೆಂದರೆ, ನರವ್ಯೂಹದ ಶಕ್ತಿಯನ್ನು. ಅದು ಮಾಂಸಖಂಡಗಳ ಶಕ್ತಿಗಿಂತಲೂ ಬೃಹತ್‌ಪ್ರಮಾಣದ ಶಕ್ತಿಯುಳ್ಳದ್ದು. ಇನ್ನೂ ಸ್ವಲ್ಪ ಆಳವಾಗಿ ಒಳಹೊಕ್ಕು ನೋಡಿದರೆ, ಮಾನಸಿಕ ಶಕ್ತಿಯು ಅನಾವರಣಗೊಳ್ಳುವುದು. ಅದು ನರವ್ಯೂಹಗಳ ಶಕ್ತಿಗಿಂತಲೂ ಸೂಕ್ಷ್ಮವಾದುದು ಮತ್ತು ಮಹತ್ತರ ಸಾಮರ್ಥ್ಯವುಳ್ಳದ್ದು. ಇನ್ನೂ ಆಳವಾಗಿ ತಮ್ಮ ಅನ್ವೇಷಣೆಯನ್ನು ಮುಂದುವರೆಸಿದ ಋಷಿಮುನಿಗಳು ಪರಿಶುದ್ಧ ಚೈತನ್ಯವೇ ಸ್ವಭಾವವಾಗುಳ್ಳ ದಿವ್ಯತೆಯ ಕಿಡಿಯನ್ನು ಕಂಡುಹಿಡಿದರು. ಆ ಮೂಲಕ ಆತ್ಮದ ಅನಂತ ಶಕ್ತಿಯನ್ನು ಅನಾವರಣಗೊಳಿಸಿದರು. ಹೀಗೆ ನಮ್ಮ ಋಷಿಮುನಿಗಳು ಮಾನವ ವ್ಯಕ್ತಿತ್ವದ ಗಾಢ ಆಯಾಮದ ಒಳಹೊಕ್ಕು ಅನ್ವೇಷಿಸಿದರು. ಈ ಪ್ರಕ್ರಿಯೆಯಲ್ಲಿ ಅವರು ಕಂಡುಕೊಂಡ ಸತ್ಯವನ್ನು ಛಾಂದೋಗ್ಯ ಉಪನಿಷತ್ತು ಹೀಗೆ ಘೋಷಿಸುತ್ತದೆ: **ತತ್ತ್ವಮಸಿ** (ಅದೇ ನೀನಾಗಿದ್ದೀಯೆ).

ಕಠೋಪನಿಷತ್ತಿಗೆ ತಾವು ಬರೆದ ಭಾಷ್ಯದಲ್ಲಿ ಶ್ರೀಶಂಕರಾಚಾರ್ಯರು (೩: ೧೦–೧೧) ಒಂದು ಗಹನ ತತ್ತ್ವವನ್ನು ಪ್ರತಿಪಾದಿಸುತ್ತಾರೆ. ಪ್ರತಿಯೊಬ್ಬ ಮಾನವ ಜೀವಿಯಲ್ಲಿಯೂ ಶಕ್ತಿ ತುಂಬುವಂಥ ಅಂಶವದು. ಬಾಹ್ಯ ಆಯಾಮದಿಂದ ಆಂತರಿಕ ಆಯಾಮದವರೆಗೆ, ಸೂಕ್ಷ್ಮತ್ವ, ವ್ಯಾಪಕತ್ವ ಮತ್ತು ಅಂತರ್ಗತತತ್ತ್ವಗಳ ಆಧಾರದ ಮೇಲೆ ನೀಚೋನ್ನತ ಕ್ರಮದಲ್ಲಿ ಈ ತತ್ತ್ವವು ಸುವ್ಯವಸ್ಥಿತವಾಗಿದೆ. ಅದನ್ನೇ ಶಂಕರಾಚಾರ್ಯರು **'ಸೂಕ್ಷ್ಮ ಮಹಂತಾಶ್ಚ, ಪ್ರತ್ಯಗಾತ್ಮ ಭೂತಶ್ಚ'** ಎನ್ನುತ್ತಾರೆ.

ಪ್ರತಿಯೊಬ್ಬ ಮಾನವಜೀವಿಯೂ ಮೂಲಭೂತವಾಗಿ ಆತ್ಮನೇ ಆಗಿದ್ದಾನೆ. ಅಂಥ ಆತ್ಮವು ಯಾವತ್ತೂ ಪರಿಶುದ್ಧವೂ, ನಿತ್ಯಮುಕ್ತವೂ, ನಿತ್ಯ ಜ್ಯೋತಿಸ್ವರೂಪವೂ ಹಾಗೂ ಅದ್ವಯ ತತ್ತ್ವವೂ ಆಗಿದೆ. ಚೈತನ್ಯವು ಬಹುವಾಗಲು ಸಾಧ್ಯವೇ ಇಲ್ಲ. ನೀವು ಆಕಾಶವನ್ನು ವಿಭಜಿಸಲಾರಿರಿ. ಆಕಾಶವು ಎಂದೆಂದಿಗೂ ಒಂದೇ ಆಗಿರುತ್ತದೆ. ಅದನ್ನು ನೀವು ವಿಭಜಿಸಲು ಸಾಧ್ಯವೇ ಇಲ್ಲ. ನಾಲ್ಕು ಗೋಡೆಗಳನ್ನು ನಿರ್ಮಾಣ ಮಾಡಿ ಒಂದು ಕೊಠಡಿಯನ್ನು ಕಟ್ಟಿದಾಕ್ಷಣ ನೀವು ಆಕಾಶವನ್ನು ಭಾಗ ಮಾಡಿದ್ದೇವೆ ಎಂದುಕೊಳ್ಳುತ್ತೀರಿ. ಆದರೆ, ಆಕಾಶವು ಎಂದೆಂದಿಗೂ ಸರ್ವವ್ಯಾಪಕ ತತ್ತ್ವವಾಗಿಯೇ ಇರುತ್ತದೆ. ಅದು ಅಂತರಂಗ, ಬಹಿರಂಗ, ಮಧ್ಯಭಾಗ ಮತ್ತು ಎಲ್ಲೆಡೆಯಲ್ಲಿಯೂ ವ್ಯಾಪಿಸಿಕೊಂಡಿದೆ. ಹಾಗೆಯೇ ಪರಿಶುದ್ಧ ಚೈತನ್ಯ, ಚಿತ್ಸ್ವರೂಪ ಅಥವಾ ಚಿತ್‌ಶಕ್ತಿಯೂ ಕೂಡ ಎಲ್ಲೆಲ್ಲೂ ಹಬ್ಬಿಕೊಂಡಿದೆ. ಇದು ಏಕಮೇವ ಅದ್ವಿತೀಯ ತತ್ತ್ವ. ಇದನ್ನೇ ಋಷಿಗಳು **ಬ್ರಹ್ಮನ್** ಅಥವಾ **ಆತ್ಮನ್** ಎಂದು ಕರೆದರು. ಇದರಿಂದಲೇ ಇಡೀ ಅಖಂಡ ವಿಶ್ವವು ಹೊರಹೊಮ್ಮಿದೆ. ಇದರಲ್ಲಿಯೇ ಆ ವಿಶ್ವವು ನೆಲೆಸಿರುತ್ತದೆ. ಮತ್ತು ಅದರೊಳಗೇ ಮತ್ತೆ ಇಡೀ ವಿಶ್ವವು ವಿಲೀನವಾಗುತ್ತದೆ. ನಿಮ್ಮಲ್ಲಿ, ನನ್ನಲ್ಲಿ ಮತ್ತು ಎಲ್ಲರಲ್ಲಿ ಅಂತರ್ಗತವಾಗಿರುವ ಅನಂತ ಬ್ರಹ್ಮನ್ ಅಥವಾ ಆತ್ಮತತ್ತ್ವವೇ ಅದು. ಆ ದಿವ್ಯಶಕ್ತಿಯ ಅಲ್ಪಾಂಶವಾದರೂ ನಿಮ್ಮ ಜೀವನದಲ್ಲಿ ಪ್ರಕಟಗೊಂಡರೆ, ನೀವು ಅತ್ಯುನ್ನತ ಮಟ್ಟದ ಚಾರಿತ್ರ್ಯವನ್ನು ಸಿದ್ಧಿಸಿಕೊಳ್ಳುತ್ತೀರಿ. ಬಳಿಕ ಇನ್ನೇನೂ ಬೇಕಾಗಿಲ್ಲ. ವೈಯಕ್ತಿಕವಾಗಿ ಹಾಗೂ ಸಾಮಾಜಿಕವಾಗಿ ಮಾನವನು ಸಾರ್ಥಕತೆಯನ್ನು ಸಾಧಿಸುವುದಕ್ಕೆ ಆಧ್ಯಾತ್ಮಿಕ ಶಕ್ತಿ ಸಂಪನ್ಮೂಲದ ಅತ್ಯಂತ ಸಣ್ಣ ಅಂಶವೇ ಸಾಕು. ಈ ಆಧ್ಯಾತ್ಮಿಕ ಶಕ್ತಿಯ ಅಭಾವವನ್ನು ನಾವಿಂದು ಭಾರತದಲ್ಲಿ ಕಾಣುತ್ತಿದ್ದೇವೆ.